# ಹರಿಕಥಾಮೃತಸಾರ - ೦೬

## ಪಂಚಮಹಾಯಜ್ಞ ಸಂಧಿ

ಹರಿಕಥಾಮೃತಸಾರ ಗುರುಗಳ । ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥

ಜನನಿ ಪಿತ ಭೂ ವಾರಿದಾಂಬರ।ವೆನಿಪ ಪಂಚಾಗ್ನಿಯಲಿ ನಾರಾ ।
ಯಣನ ತ್ರಿಂಶತಿ ಮೂರ್ತಿಗಳ ವ್ಯಾಪಾರ ವ್ಯಾಪ್ತಿಗಳ ॥
ನೆನೆದು ದಿವಸಗಳೆಂಬ ಸಮಿಧೆಗ।ಳನು ನಿರಂತರ ಹೋಮಿಸುತ ಪಾ ।
ವನಕೆ ಪಾವನನೆನಿಪ ಪರಮನ ಬೇಡು ಪರಮಸುಖ ॥ ॥೦೬-೦೧॥

ಗಗನ ಪಾವಕ ಸಮಿಧೇ ರವಿ ರ।ಶ್ಮಿಗಳೆ ಧೂಮವು ಅರ್ಚಿಯೆನಿಪುದೇ ।
ಹಗಲು ನಕ್ಷತ್ರಗಳೆ ಕಿಡಿಗಳು ಚಂದ್ರಮಾಂಗಾರ ॥
ಮೃಗವರೋದರನೊಳಗೆ ಐದು ರೂ।ಪಗಳ ಚಿಂತಿಸಿ ಭಕ್ತಿರಸ ಮಾ ।
ತುಗಳೇ ಮಂತ್ರವ ಮಾಡಿ ಹೋಮಿಸುವರು ವಿಪಶ್ಚಿತರು ॥ ॥೦೬-೦೨॥

ಪಾವಕನು ಪರ್ಜನ್ಯ ಸಮಿಧೇಯು।ಪ್ರಾವಹೀಪತಿ ಧೂಮಗಳೆ ಮೇ ।
ಘಾವಳಿಗಳರ್ಚಿ ಕ್ಷಣಪ್ರಭೆ ಗರ್ಜನವೆ ಕಿಡಿಯು ।
ಭಾವಿಸುವುದಂಗಾರ ಸಡಿಲಿಂ।ದೀ ವಿಧಾಗ್ನಿಯೊಳಬ್ಧಿಜಾತನ ।
ಕೋವಿದರು ಹೋಮಿಸುವರನುದಿನಪರಮಭಕುತಿಯಲಿ ॥ ॥೦೬-೦೩॥

ಧರಣಿಯೇಂಬುದೆ ಅಗ್ನಿ ಸಂವ।ತ್ಸರವೆ ಸಮಿಧೆ ವಿಹಾಯಸವೆ ಹೊಗೆ ।
ಇರುಳುರಿ ದಿಶಾಂಗಾರವಾಂತರದಿಗ್ವಲಯ ಕಿಡಿಯು ॥
ವರುಷವೆಂಬಾಹುತಿಗಳಿಂದಲಿ।ಹರಿಯ ಮೆಚ್ಚಿಸಿ ಸಕಲರೊಳಗ ।
ಧ್ವರಿಯನಾಗಿರು ಸರ್ವರೂಪಾತ್ಮಕನ ಚಿಂತಿಸುತ ॥ ॥೦೬-೦೪॥

ಪುರುಷ ಶಿಖಿ ವಾಕ್ಸಮಿಧೇ ಧೂಮವು।ಕರಣವರ್ಚಿಯು ಜಿಹ್ವೆ ಶ್ರೋತ್ರಗ ।
ಳೆರಡು ಕಿಡಿಗಳು ಲೋಚನಗಳಂಗಾರವೆನಿಸುವವು ॥
ನಿರುತ ಭುಂಜಿಸುವನ್ನ ಯದುಕುಲ।ವರನಿಗವದಾನಗಳು ಯಂದೀ ।
ಪರಿಸಮರ್ಪಣೆ ಗೈಯೆ ಕೈಗೊಂಡನುದಿನದಿ ಪೊರೆವಾ ॥ ॥೦೬-೦೫॥

ಮತ್ತೆ ಯೋಷಾಗ್ನಿ ಯೊಳುತಿಳಿವುದು।ಪಸ್ಥತತ್ತ್ವವೆ ಸಮಿಧೆ ಕಾಮೋ ।
ತ್ಪತ್ತಿ ಪರಮಾತುಗಳೇ ಧೂಮವು ಯೋನಿ ಮಹದರ್ಚಿ ॥
ತತ್ಪ್ರವೇಶಾಂಗಾರ ಕಿಡಿಗಳು।ಉತ್ಸಹಗಳುತ್ಸರ್ಜನವು ಪುರು ।
ಷೋತ್ತಮನಿಗವದಾನವೆನೆ ಕೈಗೊಂಡು ಮನ್ನಿಸುವ ॥ ॥೦೬-೦೬॥

ಐದು ಅಗ್ನಿಗಳಲ್ಲಿ ಮರೇಯದೆ ಐದು।ರೂಪಾತ್ಮಕನ ಇಪ್ಪ ।
ತ್ತೈದು ರುಪಗಳನುದಿನದಿ ನೆನೆವರಿಗೆ ಜನುಮಗಳ ।।
ಐದಿಸನು ನಳಿನಾಕ್ಷ ರಣದೊಳು।ಮೈದುನನ ಕಾಯ್ದಂತೇ ಸಲಹುವ ।
ಬೈದವಗೆ ಗತಿಯಿತ್ತು ಭಯಹರ ಭಕ್ತವತ್ಸಲನು ।। ।।೦೬-೦೭।।

ಪಂಚನಾರೀತುರಗದಂದದಿ।ಪಂಚ ರೂಪಾತ್ಮಕನು ತಾ ಷಟ್ ।
ಪಂಚ ರೂಪವ ಧರಿಸಿ ತತ್ತನ್ನಾಮದಿಂ ಕರೆಸಿ ।।
ಪಂಚಪಾವಕ ಮುಖದಿ ಗುಣಮಯ।ಪಂಚಭೂತಾತ್ಮಕ ಶರೀರವ ।
ಪಂಚವಿಧ ಜೀವರಿಗೆ ಕೊಟ್ಟಲ್ಲಲ್ಲೆ ರಮಿಸುವನು ।। ।।೦೬-೦೮।।

ವಿಧಿಭವಾದಿ ಸಮಸ್ತ ಜೀವರ।ಹೃದಯದೊಳಗೇಕಾತ್ಮನೆನಿಸುವ ।
ಪದುಮನಾಭನು ಅಚ್ಯುತಾದಿಅನಂತರುಪದಲಿ ।।
ಅಧಿಸುಭೂತಾಧ್ಯಾತ್ಮವಧಿದೈ।ವದೊಳು ಕರೆಸುವ ಪ್ರಾಣನಾಗಾ ।
ಭಿದನು ದಶರೂಪದಲಿ ದಶವಿಧಪ್ರಾಣರೊಳಗಿದ್ದು ।। ।।೦೬-೦೯।।

ಈರೈದು ಸಾವಿರದ ಇಪ್ಪ।ತ್ತಾರಧಿಕ ಮುನ್ನೂರು ರುಪಗ ।
ಳೀರೆರಡು ಸ್ಥಾನದಲಿ ಚಿಂತಿಪುದನುದಿನದಿ ಬುಧರು ।।
ನೂರ ಇಪ್ಪತ್ತೆಳಧಿಕ ಮೂ।ರಾರು ಸಾವಿರ ರುಪದಿಂದ ದಶ ।
ಮಾರುತರೊಳಿದ್ದವರವರ ಪೆಸರಿಂದ ಕರೆಸುವನು ।। ।।೦೬-೧೦।।

ಚಿತ್ರೈಸುವುದು ಎಂಟಧಿಕ ಇ।ಪ್ಪತ್ತು ಸಾವಿರ ನಾಲ್ಕುಶತದೈ ।
ವತ್ತ ಮೂರು ಸುಮೂರತಿಗಳು ಇಹವಲ್ಲಿ ಪರಿಯಂತ ।।
ಹತ್ತು ನಾಲಕು ರುಪಗಳ ನೆನೇ।ವುತ್ತಅವನೀಪರಿ ತಿಳಿದು ಪುರು ।
ಷೋತ್ತಮನ ಸರ್ವತ್ರ ಪೂಜೆಯ ಮಾಡು ಕೊಂಡಾಡು ।। ।।೦೬-೧೧।।

ಈರೆರಡುಶತದ್ವ್ಯಷ್ಟಧಿಕ ಹದಿ।ನಾರುಸಾವಿರ ರುಪ ಸರ್ವ ಶ ।
ರೀರದೊಳು ಶಬ್ದಾದಿಗಳಧಿಷ್ಠಾನದೊಳಗಿಪ್ಪ ।।
ಮಾರುತನು ನಾಗಾದಿ ರೂಪದಿ । ಮೂರನೇ ಗುಣಮಾನಿ ಶ್ರೀ ದು ।
ರ್ಗಾರಮಣ ವಿದ್ಯಾಕುಮೋಹವ ಕೊಡುವ ಕರಣಕ್ಕೆ ।। ।।೦೬-೧೨।।

ಐದವಿದ್ಯೆಗಳೊಳಗೆ ಇಹ ನಾ।ಗಾದಿಗಳಧಿಷ್ಟಾನದಲಿ ಲಕು ।
ಮೀಧವನು ಕೃದ್ಧೋಲ್ಕ ಮೊದಲಾದ್ಯೈದು ರುಪಗಳ ।।
ತಾ ಧರಿಸಿ ಸಜ್ಜನರವಿದ್ಯವ । ಛೇದಿಸುವ ತಾಮಸರಿಗಜ್ಞಾ ।
ನಾದಿಗಳ ಕೊಟ್ಟವರವರ ಸಾಧನವ ಮಾಡಿಸುವ ।। ।।೦೬-೧೩।।

ಗೋವುಗಳೊಳುದ್ಗೀಥನಿಹ ಪ್ರ|ಸ್ಥಾವ ಹಿಂಕಾರೆರಡು ರುಪದ |
ಲಾವಿಯಜಗಳೊಳಿಹನು ಪ್ರತಿಹಾರಾಹ್ವಯಗಳೊಳು ||
ಜೀವನಪ್ರದ ನಿಧನ ಮನುಜರೊ|ಳೀ ವಿಧದೊಳಿಹ ಪಂಚಸಾಮವ |
ಜಾವಜಾವಕೆ ನೆನೆವರಿಗೆ ಐದಿಸನು ಜನುಮಗಳ || ||೦೬-೧೪||

ಯುಗಚತುಷ್ಟಯಗಳಲಿ ತಾನಿ|ದ್ಯುಗಪ್ರವರ್ತಕ ಧರ್ಮಕರ್ಮಗ |
ಳಿಗೆ ಪ್ರವರ್ತಕ ವಾಸುದೇವಾದೀರೆರಡು ರುಪ ||
ತೆಗೆದುಕೊಂಡು ಯುಗಾದಿಕೃತು ತಾ|ಯುಗಪ್ರವರ್ತಕನೆನಿಸಿ ಧರ್ಮ |
ಪ್ರಘಟಕನು ತಾನಾಗಿ ಭಕುತರಿಗೀವ ಸಂಪದವ || ||೦೬-೧೫||

ತಲೆಯೊಳಿಹ ನಾರಾಯಣನು ಗಂ|ಟಲೆಡೆ ಒಡಲೊಳು ವಾಸುದೇವನು |
ಬಲದಲಿಹ ಪ್ರದ್ಯುಮ್ನ ಎಡಭಾಗದೊಳಗನಿರುದ್ಧ ||
ಕೆಳಗಿನಂಗದಿ ಸಂಕರುಷಣನ|ತಿಳಿದು ಈ ಪರಿ ಸಕಲ ದೇಹಗ |
ಳೊಳಗೆ ಪಂಚಾತ್ಮಕನ ರುಪವ ನೋಡಿ ಕೊಂಡಾಡು || ||೦೬-೧೬||

ತನುವಿಶಿಷ್ಟದಿ ಇಪ್ಪ ನಾರಾ|ಯಣನು ಕಟಿಪಾದಾಂತ ಸಂಕರು |
ಷಣನು ಶಿರಜಘನಾಂತವಾಗಿಹ ವಾಸುದೇವಾಖ್ಯ ||
ಅನಿಮಿಷೇಶನಿರುದ್ಧ ಪ್ರದ್ಯು|ಮ್ನನು ಎಡದಿ ಬಲಭಾಗದಲಿ ಚಿಂ |
ತನೆಯ ಮಾಳ್ಪರಿಗುಂಟೆ ಮೈಲಿಗೆ ವಿಧಿನಿಷೇಧಗಳು || ||೦೬-೧೭||

ಪದುಮನಾಭನು ಪಾಣಿ ಯೊಳಗಿಹ|ವದನದಲಿ ಹೃಷಿಕೇಶ ನಾಸಿಕ |
ಸದನದಲಿ ಶ್ರೀಧರನು ಜಿಹ್ವೇಯೊಳಿಪ್ಪ ವಾಮನನು ||
ಮೃದುಳ ತ್ವಗ್ದೆಶದಿ ತ್ರಿವಿಕ್ರಮ | ಮಧು ವಿರೋಧಿಯು ಲೋಚನದಿ ಕ |
ರ್ಣದಲಿ ಇಪ್ಪನು ವಿಷ್ಣುನಾಮಕ ಶ್ರವಣನೆಂದೆನಿಸಿ || ||೦೬-೧೮||

ಮನದೊಳಿಹ ಗೋವಿಂದ ಮಾಧವ | ಧನಪಸಖತತ್ತ್ವದೊಳು ನಾರಾ ||
ಯಣ ಮಹತತ್ತ್ವದೋಳು ಅವ್ಯಕ್ತದೊಳು ಕೇಶವನು ||
ಇನಿತು ರೂಪವ ದೇಹದೊಳು ಚಿಂ|ತನೆಯಗೈವ ಮಹಾತ್ಮರಿಳೆಯೊಳು |
ಮನುಜರವರಲ್ಲಮರರೇ ಸರಿ ಹರಿಕೃಪಾಬಲದಿ || ||೦೬-೧೯||

ನೆಲದೊಳಿಪ್ಪನು ಕೃಷ್ಣರುಪದಿ | ಜಲದೊಳಿಪ್ಪನು ಹರಿಯೆನಿಸಿ ಶಿಖಿ |
ಒಳಗೆ ಇಪ್ಪನು ಪರುಶುರಾಮನುಪೆಂದ್ರನೆಂದೆನಿಸಿ ||
ಎಲರೊಳಿಪ್ಪ ಜನಾರ್ದನನು ಬಾಂ|ದಳದೊಳಚ್ಯುತ ಗಂಧ ನರಹರಿ |
ಪೊಳೆವಧೊಕ್ಷಜ ರಸಗಳೊಳು ರಸರೂಪ ತಾನಾಗಿ || ||೦೬-೨೦||

ರೂಪ ಪುರುಷೋತ್ತಮನು ಸ್ಪರ್ಶ।ಪ್ರಾಪಕನು ಅನಿರುದ್ಧ ಶಬ್ದದಿ ।
ವ್ಯಾಪಿಸಿಹ ಪ್ರದ್ಯುಮ್ನುಪಸ್ಥದಿ ವಾಸುದೇವನಿಹ ॥
ತಾ ಪೊಳೆವ ಪಾಯುಸ್ಥನಾಗಿ ಜ।ಯಾಪತಿಯು ಸಂಕರುಷಣನು ಸು ।
ಸ್ಥಾಪಕನು ಅಹ ಪಾದದೊಳು ದಾಮೋದರನು ಪೊಳೆವ ॥ ॥೦೬-೧೦॥

ಚತುರವಿಂಶತಿ ತತ್ತ್ವದೊಳು ಶ್ರೀ।ಪತಿಯು ಅನಿರುದ್ಧಾದಿ ರುಪದಿ ।
ವಿತತನಾಗಿದ್ದಖಿಳ ಜೀವರ ಸಂಹನನದೊಳಗೆ ॥
ಪ್ರತತಿಯಂದದಿ ಸುತ್ತಿ ಸುತ್ತುತ । ಪಿತೃಗಳಿಗೆ ತರ್ಪಕನೆನಿಸಿಕೊಂ ।
ಡತುಳಮಹಿಮನು ಷಣ್ಣವತಿನಾಮದಲಿ ನೆಲಸಿಹನು ॥॥೦೬-೧೧॥

ಚತುರವಿಂಶತಿ ತತ್ತ್ವ ದೊಳು  ತ।ತ್ಪತಿಗಳೆನಿಸುವ ಬ್ರಹ್ಮಮುಖ ದೇ ।
ವತೆಗಳೊಳು ಹನ್ನೊಂದುನೂರೈವತ್ತೆರಡು ರುಪ ॥
ವಿತತನಾಗಿದ್ದೆಲ್ಲ ಜೀವರ । ಜತನ ಮಾಡುವಗೋಸುಗ ಜಗ ।
ತ್ಪತಿಗೆ ಏನಾದರು ಪ್ರಯೋಜನ ವಿಲ್ಲವಿದರಿಂದ ॥ ॥೦೬-೧೨॥

ಇಂದಿರಾಧವ ಶಕ್ತಿ ಮೊದಲಾ।ದೊಂದಧಿಕ ದಶರೂಪದಿಂದಲಿ ।
ಪೊಂದಿಹನು ಸಕಲೇಂದ್ರಿಯಗಳಲಿ ಪುರುಷನಾಮಕನು ॥
ಸುಂದರಪ್ರದ ಪೂರ್ಣಜ್ಞಾನಾ।ನಂದಮಯ ಚಿದ್ದೇಹದೊಳು ತಾ ।
ನೊಂದರೆಕ್ಷಣವಗಲದಲೆ ಪರಮಾಪ್ತನಾಗಿಪ್ಪ ॥ ॥೦೬-೧೪॥

ಆರಧಿಕ ದಶರುಪದಿಂದಲಿ।ತೋರುತಿಪ್ಪನು ವಿಶ್ವ ಲಿಂಗ ಶ ।
ರೀರದೊಳು ತೈಜಸನು ಪ್ರಾಜ್ಞನು ತುರ್ಯನಾಮಕನು ॥
ಮೂರಯಿದು ರೂಪಗಳ ಧರಿಸುತ।ಲೀರಯಿದು ಕರಣದೊಳು ಮಾತ್ರದಿ ।
ಖೇರ ಶಿಖಿ ಜಲಭೂಮಿಯೊಳಗಿಹನಾತ್ಮನಾಮದಲಿ ॥ ॥೦೬-೧೫॥

ಮನದೊಳಹಂಕಾರದಲಿ ಚಿಂ।ತನೆಯ ಮಾಳ್ಪುದು ಅನ್ತರಾತ್ಮನ ।
ಘನ ಸುತತ್ತ್ವದಿ ಪರಮನವ್ಯಕ್ತದಲಿ ಜ್ಞಾನಾತ್ಮ ॥
ಇನಿತು ಪಂಚಾಶದ್ವರಣ ವೇ।ದ್ಯನ ಅಜಾದ್ಯೈವತ್ತು ಮೂರ್ತಿಗ ।
ಳನು ಸದಾ ಸರ್ವತ್ರ ದೇಹಗಳಲ್ಲಿ ಪೂಜಿಪುದು ॥ ॥೦೬-೧೬॥

ಚತುರವಿಂಶತಿ ತತ್ತ್ವದೊಳು ತ।ತ್ಪತಿಗಳನೆಸುವ ಬ್ರಹ್ಮಮುಖ ದೇ ।
ವತೆಗಳೊಳು ಹದಿಮುರು ಸಾವಿರದೆಂಟು ನೂರಧಿಕ ॥
ಚತುರವಿಂಶತಿ ರುಪದಿಂದಲಿ । ವಿತತನಾಗಿದ್ದೆಲ್ಲರೊಳು ಪ್ರಾ ।
ಕೃತ ಪುರುಷನಂದದಲಿ ಪಂಚಾತ್ಮಕನು ರಮಿಸುವನು ॥ ॥೦೬-೧೭॥

ಕೇಶವಾದಿ ಸುಮೂರ್ತಿ ದ್ವಾದಶ । ಮಾಸ ಪುಂಡ್ರಗಳಲ್ಲಿ ವೇದ ।
ವ್ಯಾಸ ಅನಿರುದ್ಧಾದಿ ರುಪಗಳಾರು ಋತುಗಳಲಿ ॥
ವಾಸವಾಗಿಹವೆಂದು ತ್ರಿಂಶತಿ । ವಾಸರದಿ ಸತ್ಕರ್ಮ ಧರ್ಮ ನಿ ।
ರಾಶೆಯಿಂದಲಿ ಮಾಡು ಕರುಣವ ಬೇಡು ಕೊಂಡಾಡು ॥ ॥೦೬-೨೮ ॥

ಲೊಷ್ಟ ಕಾಂಚನ ಲೋಹ ಶೈಲಜ । ಕಾಷ್ಟ ಮೊದಲಾದಖಿಳ ಜಡ ಪರ ।
ಮೇಷ್ಠಿ ಮೊದಲಾದಖಿಳ ಚೇತನರೊಳಗೆ ಅನುದಿನವು ॥
ಚೇಷ್ಟೆಗಳ ಮಾಡಿಸುತ ತಿಳಿಸದೆ । ಪ್ರೇಷ್ಠನಾಗಿದ್ದೆಲ್ಲರಿಗೆ ಸ ।
ರ್ವೆಷ್ಟದಾಯಕ ಸಂತಯಿಸುವನು ಸರ್ವಜೀವರನು ॥ ॥೦೬-೨೯॥

ವಾಸುದೆವನಿರುದ್ಧರೂಪದಿ । ಪುಂಶರೀರದೊಳಿಹನು ಸರ್ವದ ।
ಸ್ತ್ರೀಶರೀರದೊಳಿಹನು ಸಂಕರುಷಣನು ಪ್ರದ್ಯುಮ್ನ ॥
ದ್ವಾಸುರ್ಪಣಶ್ರುತಿವಿನುತ ಸ।ರ್ವಾಸುನಿಲಯ ನಾರಾಯಣನ ಸದು ।
ಪಾಸನೆಯಗೈವವರು ಜೀವನ್ಮುಕ್ತರೆನಿಸುವರು ॥ ॥೦೬-೩೦॥

ತನ್ನನಂತಾನಂತರೂಪ ಹಿ।ರಣ್ಯಗರ್ಭಾದಿಗಳೊಳಗೆ ಕಾ ।
ರುಣ್ಯಸಾಗರ ಹರಹಿ ಅವರವರಖಿಳ ವ್ಯಾಪಾರ ॥
ಬನ್ನಬಡದಲೆ ಮಾಡಿ ಮಾಡಿಸಿ । ಧನ್ಯರೆನಿಸಿ ಸಮಸ್ತ ದಿವಿಜರ ।
ಪುಣ್ಯಕರ್ಮವ ಸ್ವೀಕರಿಸಿ ಫಲವಿತ್ತು ಪಾಲಿಸುವ ॥ ॥೦೬-೩೧॥

ಸಾಗರದೊಳಿಹ ನದಿಯ ಜಲಭೇ।ದಾಗಸದೊಳಿಪ್ಪಬ್ದ ಬಲ್ಲವು ।
ಕಾಗೆಗುಬ್ಬಿಗಳರಿಯಬಲ್ಲವೆ ನದಿಯ ಜಲ ಸ್ಥಿತಿಯ ॥
ಭೋಗಿವರ ಪರಿಯಂಕ ಶಯನನೊ।ಳೀ ಗುಣತ್ರಯಬದ್ಧ ಜಗವಿಹು ।
ದಾಗಮಜ್ಞರು ತಿಳಿವರಜ್ಞಾನಿಗಳಿಗಳವಡದು ॥ ॥೦೬-೩೨॥

ಕರಣಗುಣಭೂತಗಳೊಳಗೆ ತ।ದ್ವರರೆನಿಪ ಬ್ರಹ್ಮಾದಿ ದಿವಿಜರೊ ।
ಳರಿತು ರೂಪ ಚತುಷ್ಟಯಗಳನುದಿನದಿ ಸರ್ವತ್ರ ॥
ಸ್ಮರಿಸುತನುಮೊದಿಸುತ ಹಿಗ್ಗುತ । ಪರವಶದಿ ಪಾಡುವವರಿಗೆ ತ ।
ನ್ನಿರವ ತೋರಿಸಿ ಭವವಿಮುಕ್ತರ ಮಾಡಿ ಪೋಷಿಸುವ ॥ ॥೦೬-೩೩॥

ಮೂಲರುಪನು ಮನದೊಳಿಹ ಶ್ರವ।ಣಾಲಿಯೊಳಗಿಹ ಮತ್ಸ್ಯ ಕೂರ್ಮನು ।
ಕೋಲರೂಪನು ತ್ವಗ್ರಸನದೊಳಿಪ್ಪ ನರಸಿಂಹ ॥
ಬಾಲವಟು ವಾಮನನು ನಾಸಿಕ । ನಾಳದೊಳು ವದನದಲಿ ಭಾರ್ಗವ ।
ವಾಲಿಭಂಜನ ಹಸ್ತದೊಳು ಪಾದದಲಿ ಶ್ರೀಕೃಷ್ಣ ॥ ॥೦೬-೩೪॥

ಜಿನ ವಿಮೋಹಕ ಬುದ್ಧ ಪಾಯುಗ । ದನುಜಮರ್ದನ ಕಲ್ಕಿ ಮೇಢ್ರದಿ ।
ಇನಿತು ದಶರೂಪಗಳ ದಶಕರಣಂಗಳಲಿ ತಿಳಿದು ॥
ಅನುಭವಿಪ ವಿಷಯಗಳ ಕೃಷ್ಣಾರ್ಪಣವೆನಲು ಕೈಕೊಂಬ ವೃಜಿನಾ ।
ರ್ದನ ವರಜಗನ್ನಾಥವಿಠ್ಠಲ ವಿಶ್ವವ್ಯಾಪಕನು ॥ ||೦೬-೩೫||

ooooooooooooooooooooooooooooooooooooooooooo